## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ 2019-20ನೇ ಸಾಲಿಗೆ ಆಯುಧಗಳನ್ನು ಪರಿವೀಕ್ಷಣೆ ಮಾಡಲು ಬೇಕಾದ 27 ವಿವಿಧ ಬಗೆಯ ಗೇಜ್ ಗಳನ್ನು ಖರೀದಿಸಲು ಪರಿಷ್ಕೃತ ದರವನ್ನು ಸೇರಿಸಿ ಒಟ್ಟು ರೂ.1,72,25,994/- ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ ಆದೇಶ.

ಓದಲಾಗಿದೆ: ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: 17/ಆಯುಧ/2018-19, ದಿನಾಂಕ: 08.05.2019, 27.09.2019.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರಗಳಲ್ಲಿ ಡಿಜಿ & ಐಜಿಪಿ ರವರು ಪತ್ರದಲ್ಲಿ 2018-19ನೇ ಸಾಲಿಗೆ ಬಾಕಿ ಇರುವ ಎನ್.ಡಿ.ಸಿ ಬಿಲ್ಲುಗಳ ವಿವರಗಳನ್ನು ಕೆಳಕಂಡಂತೆ ಒದಗಿಸಿರುತ್ತಾರೆ.

| Sl.No | Name of the Ordnance Factory | Types of Items | A.C.Bill Token No and Date | Amount |
|---|---|---|---|---|
| 1 | General Manager, Ammunition Fanctory, Khadki, Pune | d) Cart.9mm Ball-1,70,704 Nos<br>e) Morter Bomb 51mm HE2A-10 Nos<br>f) Cartg. SA.22"Ball-50,000 Nos | 1800367097/ 22.11.2018 | 76,03,146/- |
| 2 | -do- | Freight Charges for collection Above Ammunitions | 1800392629/ 30.11.2018 | 1,30,000/- |
| 3 | DG.CRPF, Rampur | Balance Qty of 40 Nos of 7.62mm SLR & 12 Nos of 7.62mm LMG | 1800379691/ 27.11.2018 | 11,64,000/- |
| 4 | -do- | Freight Charges for Collection Above Weapons | 180041147/ 05.12.2018 | 50,000/- |
| 5 | General Manager, Rifle Factory Ishapore | Balance Qty of 140 Nos of Tear Gas Gun | 1800605594/ 29.01.2019 | 1,44,75,650/- |
| 6 | -do- | Freight Charges for collection of above Weapons | 1800605600/ 29.01.2019 | 80,000/- |
| 7 | General Manager, Tear Smoke Unit, BSF, Tekanpur | 21 different types of 68,127 Nos of Tear Smoke Munitions. | 1801039516/ 19.03.2019 | 6,57,05,846/- |
| 8 | -do- | Freight Charges for collection of avove Tear Smoke Munitions | 1801039529/ 19.03.2019 | 4,00,000/- |
| | | Total | | 8,96,08,642/- |

ದಿನಾಂಕ 08.02.2008ರ ಸರ್ಕಾರದ ಆದೇಶದಲ್ಲಿ ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್ಡಿನೆನ್ಸ್ ಫ್ಯಾಕ್ಟರಿಗಳಿಂದ ಖರೀದಿಸುವ ಸಾಮಗ್ರಿಗಳ ಬಾಬ್ತುಗಳಿಗೆ ಎ.ಸಿ.ಬಿಲ್ಲುಗಳ ಮೇಲೆ ಡ್ರಾ ಮಾಡುವ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಲು 09 ತಿಂಗಳುಗಳ ಕಾಲಾವಕಾಶ ನೀಡಲಾಗಿದೆ. ಎಂದು ಆದರೆ ಮೇಲ್ಕಂಡ ಫ್ಯಾಕ್ಟರಿ/ಘಟಕಗಳಿಂದ ಆಯುಧ, ಮದ್ದುಗುಂಡು ಮತ್ತು ಅಶ್ರುವಾಯು ಸಾಮಗ್ರಿಗಳನ್ನು ಸರಬರಾಜು ಮಾಡಲು ಇನ್ನೂ ಕಾಲಾವಕಾಶ ನೀಡಲು ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ 2018-19ನೇ ಸಾಲಿನ 08 ಎ.ಸಿ. ಬಿಲ್ಲುಗಳಲ್ಲಿ ಡ್ರಾ ಮಾಡಿರುವ ಮೊತ್ತಕ್ಕೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಲು ಇನ್ನೂ 06 ತಿಂಗಳ ಕಾಲಾವಕಾಶ ನೀಡಲು ಹಾಗೂ ಇಲಾಖೆಯ ಇನ್ನಿತರೆ ಎ.ಸಿ/ಡಿ.ಸಿ ಬಿಲ್ಲುಗಳನ್ನು ಸೆಳೆಯಲು ರಾಜ್ಯ ಪೊಲೀಸ್ ಖಜಾನೆಗೆ ನಿರ್ದೇಶನ ನೀಡಲು ಪ್ರಸ್ತಾಪಿಸಿರುತ್ತಾರೆ.

Scanned with CamScanner

ಆದುದರಿಂದ, 2019-20ನೇ ಸಾಲಿಗೆ ಅಂದಾಜಿಸಲಾಗಿರುವ 27 ವಿವಿಧ ಬಗೆಯ ಗೇಜ್ ಗಳನ್ನು ಖರೀದಿಸಲು ಪರಿಷ್ಕೃತ ದರ ಸೇರಿ ಒಟ್ಟು ವೆಚ್ಚ ರೂ.1,72,25,994/- ಗಳಿಗೆ ಸರ್ಕಾರದ ಮಂಜೂರಾತಿ ಮತ್ತು ಸದರಿ ಹಣವನ್ನು ಎ.ಸಿ ಬಿಲ್ ನಲ್ಲಿ ಡ್ರಾ ಮಾಡಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 06 ಪಿಎಫ್ಎಸ್ 2019, ಬೆಂಗಳೂರು,**

**ದಿನಾಂಕ: 20/ಮಾರ್ಚ್/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಸಾಲಿಗೆ ಆಯುಧಗಳನ್ನು ಪರಿವೀಕ್ಷಣೆ ಮಾಡಲು ಬೇಕಾದ 27 ವಿವಿಧ ಬಗೆಯ ಗೇಜ್ ಗಳ ದರವನ್ನು ಪರಿಷ್ಕರಿಸಿದ್ದು ರೂ.172.25 ಲಕ್ಷಗಳ ವೆಚ್ಚದಲ್ಲಿ ಖರೀದಿಸಲು ಅನುಮೋದನೆಯಾಗಿರುವುದರಿಂದ ಶೇ.60% ಅಂದರೆ ರೂ.103.36 ಲಕ್ಷಗಳನ್ನು (ಒಂದು ನೂರ ಮೂರು ಲಕ್ಷ ಮೂವತ್ತಾರು ಸಾವಿರ ಮಾತ್ರ) ಎ.ಸಿ. ಬಿಲ್ಲಿನ ಮೇಲೆ ಸೆಳೆದು ಕೇಂದ್ರ ರಕ್ಷಣಾ ಮಂತ್ರಾಲಯಕ್ಕೆ ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಈ ವೆಚ್ಚವನ್ನು 2019-20ನೇ ಸಾಲಿನ ಲೆಕ್ಕಶೀರ್ಷಿಕೆ 2055-00-109-1-01-221 ಸಾಮಗ್ರಿ ಮತ್ತು ಸರಬರಾಜು ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 68 ವೆಚ್ಚ-11/2019, ದಿನಾಂಕ: 11/03/2020 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[ಬಿ.ಎಸ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.

Scanned with CamScanner

4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.

5. ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.

6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.

7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನಸೌಧ.

9. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ.

10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಹೊರಡಿಸಿದೆ
ಒಳಾಡಳಿತ ಇಲಾಖೆ
ಸಂಸ್ಕೃತಿ ಮತ್ತು ರಜಾ ಶಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ

Scanned with CamScanner